ಬೆಂಗಳೂರು ನಗರದಲ್ಲಿ ನೊಂದಣಿಯಾಗಿರುವ ಸಂಘ : ಸಂಸ್ಥೆಗಳ ಬಗ್ಗೆ.

1481 – ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕರ್ನಾಟಕ ಸಂಘ ಸಂಸ್ಥೆಗಳ ಕಾಯಿದೆಯಡಿಯಲ್ಲಿ ನೋಂದಾಯಿಸಲ್ಪಟ್ಟಿರುವ ಸಂಘ ಸಂಸ್ಥೆಗಳ ಸಂಖ್ಯೆ?

ಆ) ಅವುಗಳಲ್ಲಿ ಎಷ್ಟು ಸಂಘ ಸಂಸ್ಥೆಗಳು ಸರ್ವ ಸದಸ್ಯರ ಸಭೆಯನ್ನು ಕಳೆದ ಎರಡು ವರ್ಷಗಳಲ್ಲಿ ನಡೆಸಿಲ್ಲ?

ಇ) ಪ್ರತಿ ವರ್ಷ ಸರ್ವ ಸದಸ್ಯರ ಸಭೆ ಕಡ್ಡಾಯವಾಗಿ ನಡೆಸುವುದು, ತಪ್ಪಿದಲ್ಲಿ ನೊಂದಣಿ ರದ್ದುಪಡಿಸುವಂತೆ ಸದರಿ ಕಾಯಿದೆಗೆ ಸರ್ಕಾರವು ತಿದ್ದುಪಡಿ ತರುತ್ತಿದೆಯೇ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು) :

ಅ) 13,102

ಆ) 11,502

ಇ) ಸಧ್ಯದಲ್ಲಿ ಇಲ್ಲ.

ಗೃಹ ನಿರ್ಮಾಣ ಸಂಘಗಳ ವ್ಯವಹಾರದ ಬಗ್ಗೆ ಶ್ರೀ.ಜಿ.ವಿ.ಕೆ.ರಾವ್ ಸಮಿತಿ ನೀಡಿರುವ ವರದಿ.

1479 – ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಇರುವ ಗೃಹ ನಿರ್ಮಾಣ ಸಹಕಾರ ಸಂಘಗಳ ವ್ಯವಹಾರ ಬಗ್ಗೆ ಶ್ರೀ ಜಿ.ವಿ.ಕೆ. ರಾವ್ ಸಮಿತಿ ನೀಡಿರುವ ವರದಿ ಸರ್ಕಾರಕ್ಕೆ ಗೊತ್ತಿದೆಯೇ

ಆ) ಹಾಗಿದ್ದಲ್ಲಿ ಸರ್ಕಾರವು ಈ ವರದಿ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ ಕೆ.ಹೆಚ್.. ಪಾಟೀಲ್ (ಸಹಕಾರ ಮಂತ್ರಿಗಳು)

ಅ) ಹೌದು.

ಆ)

1) ಸಹಕಾರ ಸಂಘಗಳ ಕಾಯಿದೆ 1959 ಕಲಂ 64 ರೀತಿ ವಿಚಾರಣೆ ಮಾಡಿ ಶ್ರೀ ಜಿ.ವಿ.ಕೆ. ರಾವ್ ಇವರು ಕೊಟ್ಟಿರುವ ವರದಿಯ ಆಧಾರದ ಮೇಲೆ ಕಂಡು ಬಂದ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಸಹಕಾರ ಸಂಘಗಳ ಕಾಯಿದೆ 1959 ಕಲಂ ರೀತಿ ಸಹಕಾರ ಸಂಘಗಳ ನಿಬಂಧಕರು ಆದೇಶ ಕೊಟ್ಟಿರುತ್ತಾರೆ.

2) ದುರುಪಯೋಗ ಗುರುತು ಮಾಡಿರತಕ್ಕಂತಹ ಪ್ರಕರಣಗಳಲ್ಲಿ 3ಕ್ಕೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ. ಇನ್ನು ಒಂದು ಪ್ರಕರಣ ಪರಿಶೀಲನೆಯಲ್ಲಿದೆ.

3) 29 ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಸಹಕಾರ ಸಂಘಗಳ ಕಾಯಿದೆ ಸಹಕಾರ ಸಂಘಗಳ ನಿಯಮ ಮತ್ತು ಬೈಲಾ ಉಲ್ಲಂಘಿಸಿದ ಬಗ್ಗೆ ನಿರ್ದಿಷ್ಟ ಕ್ರಮ ತೆಗೆದುಕೊಳ್ಳಲು ಸಂಯುಕ್ತ ನಿಬಂಧಕರು, ಬೆಂಗಳೂರು ಇವರಿಗೆ ನಿರ್ದೇಶನ ನೀಡಲಾಗಿದೆ.

4) ಸಹಕಾರ ಸಂಘಗಳ ನಿಬಂಧಕರ ಮೂಲಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 30-ಬಿ ರೀತಿ ಸಂಘಗಳು ಸದಸ್ಯರಿಗೆ ನಿವೇಶನಗಳನ್ನು